
# ಇತಿಹಾಸದ ಪುಟಗಳಿಂದ...



## ಮಯೂರ ಶರ್ಮ

ಕದಂಬ ವಂಶವು ಕರ್ನಾಟಕದ ನೆಲವನ್ನಾಳಿದ ಮೊದಲ ಕನ್ನಡ ರಾಜವಂಶ. ಬನವಾಸಿಯನ್ನು ಕೇಂದ್ರವನ್ನಾಗಿಟ್ಟುಕೊಂಡು, ಈ ವಂಶವು ಕ್ರಿ.ಶ.೩೪೫ ರಿಂದ ಕ್ರಿ.ಶ.೫೬೦ರ ವರೆಗೆ ಕರ್ನಾಟಕದ ಮಧ್ಯಭಾಗವನ್ನು ಆಳಿತು. ಈ ವಂಶದ ಸಂಸ್ಥಾಪಕನೇ ಮಯೂರ ಶರ್ಮ. ಮಯೂರ ಶರ್ಮನು ತನ್ನ ಸಾಮ್ರಾಜ್ಯವನ್ನು ಹೇಗೆ ಸ್ಥಾಪಿಸಿದನು? ಈ ಕಥೆ ಅತ್ಯಂತ ರೋಚಕವಾಗಿದೆ.

ಮಯೂರ ಶರ್ಮನು ಬ್ರಾಹ್ಮಣ ಕುಟುಂಬದಲ್ಲಿ ಜನಿಸಿ, ವೇದಾಧ್ಯಯನ, ಶಾಸ್ತ್ರಾಧ್ಯಯನಗಳಲ್ಲಿ ನಿರತನಾಗಿದ್ದವನು. ಮಾನವ್ಯ ಗೋತ್ರಕ್ಕೆ ಸೇರಿದ ಹಾರೀತಪುತ್ರರೆಂಬ ಸನಾತನ ಬ್ರಾಹ್ಮಣ ಕುಟುಂಬದ ಮನೆಯ ಬಳಿ ಒಂದು ಕದಂಬ ವೃಕ್ಷವಿದ್ದುದರಿಂದ ಅವರಿಗೆ ಕದಂಬರು ಎಂಬ ಹೆಸರು ಬಂತು.

ತನ್ನ ಗುರುಗಳಾದ ವೀರಶರ್ಮರೊಂದಿಗೆ ಅಧ್ಯಯನ, ವೈದಿಕ ಕರ್ಮಗಳಿಗಾಗಿ ಕಂಚಿಯಲ್ಲಿದ್ದ ಘಟಿಕಾಸ್ಥಾನಕ್ಕೆ ಹೋಗಿದ್ದನು. ಆದರೆ ಪಲ್ಲವ ರಾಜಧಾನಿಯಾದ ಕಂಚಿಯ ಕೆಲವು ಮಂದಿ ಅಧಿಕಾರಿಗಳಿಂದ ಅವರು ನಿಂದಿಸಲ್ಪಟ್ಟರು. ಅದರಿಂದ ತೀವ್ರ ಅಸಮಾಧಾನಗೊಂಡ ಮಯೂರ ಶರ್ಮನು ಕಂಚಿಯನ್ನು ತ್ಯಜಿಸಿ, ಪಲ್ಲವರನ್ನು ಸದೆಬಡಿಯುವ ಸಂಕಲ್ಪ ಮಾಡಿದನು. ದರ್ಭೆಯ ಹುಲ್ಲನ್ನು ಹಿಡಿದ, ಯಜ್ಞಕ್ಕೆ ಆಹುತಿ ನೀಡುತ್ತಿದ್ದ ಕೈಗಳು ಈಗ ಖಡ್ಗವನ್ನು ಹಿಡಿದವು. ಶ್ರೀಪರ್ವತದ ದಟ್ಟಡವಿಯಲ್ಲಿ ಅವನು ಒಂದು ಸಶಸ್ತ್ರ ಪಡೆಯನ್ನು ಕಟ್ಟಿದನು. ಬಾಣರು ಮತ್ತು ಇತರರ ಮೇಲೆ ಕಪ್ಪವನ್ನು ವಿಧಿಸಿದ ಮಯೂರ ಶರ್ಮನು ಪಲ್ಲವರ ಕೋಪಕ್ಕೆ ಗುರಿಯಾದನು. ಅವನನ್ನು ಸದೆಬಡಿಯಲು ಪಲ್ಲವರು ಒಂದು ಸೈನ್ಯವನ್ನು ಕಳುಹಿಸಿದರು. ಆ ಸೈನ್ಯವನ್ನು ಹಿಮ್ಮೆಟ್ಟಿಸಿದಾಗ, ಪಲ್ಲವರು ಮಯೂರ ಶರ್ಮನೊಂದಿಗೆ ಒಪ್ಪಂದ ಮಾಡಿಕೊಂಡರು. ಪಶ್ಚಿಮ ಕರಾವಳಿಯಿಂದ ಮಲಪ್ರಭಾ ನದಿಯವರೆಗಿನ ಪ್ರದೇಶಕ್ಕೆ ಅವರು ಮಯೂರ ಶರ್ಮನನ್ನು ರಾಜನನ್ನಾಗಿ ನೇಮಿಸಿದರು. ಮುಂದೆ ಅವನು ಸೇಂದ್ರದ, ಪುನ್ನಾಟ, ತ್ರಿಕೂಟ, ಆಭೀರ ಮತ್ತು ಇತರ ಪ್ರದೇಶಗಳನ್ನು ಜಯಿಸಿ ತನ್ನ ಕದಂಬ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡನು. ಮಯೂರ ವರ್ಮನು ಕೆರೆ ಕಟ್ಟಿಸುವುದು ಮುಂತಾದ ಸಾರ್ವಜನಿಕ ಹಿತದ ಕೆಲಸಗಳನ್ನು ಮಾಡಿಸಿದನು.

ಶಕ್ತರಾದ ಅಧಿಕಾರಿಗಳು ದುರ್ಬಲರನ್ನು ತುಳಿದು ತಮ್ಮ ದರ್ಪವನ್ನು ತೋರಿಸುವುದು ಎಲ್ಲ ಕಾಲದಲ್ಲೂ ಸರ್ವೇಸಾಮಾನ್ಯ. ಆದರೆ ಅದೇ ಕಾರಣದಿಂದ ಪಣತೊಟ್ಟು, ಒಂದು ಸರ್ವಾಧಿಕಾರಿ ಸಾಮ್ರಾಜ್ಯವನ್ನೇ ಬೀಳಿಸಿದ, ದುಷ್ಟ ಅಧಿಕಾರಿಗಳಿಗೆ ತಕ್ಕ ಶಾಸ್ತಿ ಮಾಡಿದ ಶೌರ್ಯದ ಉದಾಹರಣೆಗಳು ನಮ್ಮಲ್ಲಿವೆ. ಪೌರಾಣಿಕ ಯುಗದ ಪರಶುರಾಮ, ಚಾಣಕ್ಯ-ಚಂದ್ರಗುಪ್ತ ಮೌರ್ಯ, ಹರಿಹರ-ಬುಕ್ಕ, ಶಿವಾಜಿ, ಝಾನ್ಸಿ ಲಕ್ಷ್ಮೀಬಾಯಿ - ಹೀಗೆ ಅನೇಕ ನಿದರ್ಶನಗಳನ್ನು ನಾವು ಕಾಣುತ್ತೇವೆ.

ಇತಿಹಾಸದಲ್ಲಿ ಅತ್ಯಂತ ಪ್ರಧಾನ ಆಕರವೆಂದು ಪರಿಗಣಿಸಲಾಗಿರುವ ಶಿಲಾಶಾಸನಗಳು ಮಯೂರ ಶರ್ಮನ ಈ ಸಾಮ್ರಾಜ್ಯ ಸ್ಥಾಪನೆಯ ಕಾರ್ಯವನ್ನು ಹೇಳುತ್ತದೆ. ಕ್ರಿ.ಶ. ೩೪೫ರಿಂದ ೩೬೦ರ ವರೆಗೆ ಅವನು ಆಳಿದನು. ಸಾಮಾನ್ಯ ವ್ಯಕ್ತಿಯೊಬ್ಬ ಕೂಡ ಕೆರಳಿ ನಿಂತರೆ ಎಂತಹ ದೊಡ್ಡ ಸಾಮ್ರಾಜ್ಯವನ್ನೂ ಸದೆಬಡಿಯಬಲ್ಲನೆಂಬುದನ್ನು ಮಯೂರಶರ್ಮನು ತೋರಿಸಿಕೊಟ್ಟನು. ❖

'ಜ್ಯೋತಿಷ್ಮತಿ'

ಕದಂಬ ಸಾಮ್ರಾಜ್ಯ

